**ದಿನಾಂಕಃ 23.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ 1 ಮತ್ತು 3 ನೇ ಆರೋಪಿ ಪರ ವಕೀಲರಿಂದಃ–**

13. ಚಾಸಾ–1 ಗೊತ್ತು. ನಾನು ವಾಸವಿರುವ ಮನೆಯನ್ನು ಸರ್ಕಾರದ ಯೋಜನೆಯಡಿಯಲ್ಲಿ ನೀಡಲಾಗಿರುತ್ತದೆ. ಅಲ್ಲಿ ಒಟ್ಟು 24 ಮನೆಗಳನ್ನು ನೀಡಿರುತ್ತಾರೆ. ಕೆಳಗಡೆ ಮೂರು ಮನೆಗಳು ಮತ್ತು ಮೊದಲ ಅಂತಸ್ತಿನಲ್ಲಿ ಮೂರು ಮನೆಗಳು. ನಾನು ಚಾಸಾ–1 ರವರ ಜೊತೆಯಲ್ಲಿ ಕೆಲಸ ಮಾಡುತ್ತಿರಲಿಲ್ಲ. ಚಾಸಾ–1 ರವರ ತಂದೆಯ ಜೊತೆಯಲ್ಲಿ ಸುಮಾರು 25 ವರ್ಷಗಳ ಹಿಂದೆ ಕೆಲಸ ಮಾಡುತ್ತಿದ್ದೆ. ಮೃತ ರವಿ ನನ್ನ ಮನೆಯ ಮೇಲುಗಡೆ ವಾಸ ಮಾಡುತ್ತಿದ್ದ. ಆ ಮನಯಲ್ಲಿ ಮೃತ ರವಿ ಬಾಡಿಗೆಗೆ ಇದ್ದ. ಆ ಮನೆಯ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಸುಮಾರು 3 ಬಾರಿ ಆ ಮನೆ ಮಾರಾಟವಾಗಿರುತ್ತದೆ. ಕಳೆದ 10 ವರ್ಷಗಳಿಂದ ಆ ನನ್ನ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ.

14. ರವಿ ಆ ಮನೆಯಲ್ಲಿ ಬಾಡಿಗೆಗೆ ಒಬ್ಬನೇ ವಾಸ ಮಾಡುತ್ತಿದ್ದ. ಆತನ ತಂದೆ–ತಾಯಿಯನ್ನು ನಾನು ನೋಡಿರುವುದಿಲ್ಲ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಆತ ಯಾವ ಉದ್ದೇಶದಿಂದ ಆತನ ಊರನ್ನು ಬಿಟ್ಟು ಮೈಸೂರಿಗೆ ಬಂದಿದ್ದ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಬಳಿಯಲ್ಲಿ ಮೃತ ರವಿ ಕೆಲಸ ಮಾಡುತ್ತಿರಲಿಲ್ಲ. ಆತ ಚಾಸಾ–1 ಪುಷ್ಪರಾಜ್ ರವರೊಂದಿಗೆ ಕೆಲಸ ಮಾಡುತ್ತಿದ್ದ. ನಾನು ರವಿಯ ಮನೆಗೆ ಹೋಗುತ್ತಿರಲಿಲ್ಲ. ಆತ ಹೋಟೆಲಿನಲ್ಲಿ ಊಟ ಮಾಡುತ್ತಿದ್ದ. ಆತನ ಮನೆಗೆ ಈ ಮೂವರು ಆರೋಪಿತರನ್ನು ಹೊರತು ಪಡಿಸಿ, ಬೇರೆ ಯಾರು ಬರುತ್ತಿರಲಿಲ್ಲ. ಮೃತ ರವಿ ಆ ಮನೆಗೆ ಬಂದ ನಂತರ ದಿನಾಲೂ ಈ ಮೂವರು ಆರೋಪಿತರು ಬರುತ್ತಿದ್ದರು. ಮನೆಯ ಒಳಗೆ ಚಿಲಕ ಹಾಕಿಕೊಂಡು ಇರುತ್ತಿದ್ದರು, ಒಮ್ಮೊಮ್ಮೆ ಈ ಮೂವರು ಆರೋಪಿತರು ಅಲ್ಲಿಯೇ ರಾತ್ರಿ ಮಲಗುತ್ತಿದ್ದರು. ಆರೋಪಿತರ ಬಗ್ಗೆ ಮೃತ ರವಿ ನನ್ನಲ್ಲಿ ಯಾವುದೇ ವಿಚಾರವನ್ನು ಹೇಳಿರಲಿಲ್ಲ. ಮೃತ ರವಿ ಬೆಳಿಗ್ಗೆ ಕೆಲಸಕ್ಕೆ ಹೋದರೆ, ಸಂಜೆ ವಾಪಸ್ಸು ಬರುತ್ತಿದ್ದ. ಕೆಲವೊಮ್ಮೆ ಕೆಲಸವಿದ್ದ ದಿನಗಳಂದು ಆತ ಇದ್ದ ಸ್ಥಳದಲ್ಲಿಯೇ ಉಳಿದುಕೊಳ್ಳುತ್ತಿದ್ದ. ಆ ರೀತಿ ಉಳಿದಾಗ, ನನಗೇನೂ ಫೋನು ಮಾಡಿ ವಿಷಯ ತಿಳಿಸುತ್ತಿರಲಿಲ್ಲ. ಆತನ ಬಳಿಯಲ್ಲಿ ನನ್ನ ಫೋನ್ ನಂಬರ್ ಇರಲಿಲ್ಲ.

15. ದಿಃ14.12.2020 ರಂದು ನನಗೆ ಕೆಲಸ ಇರಲಿಲ್ಲ. ಹೀಗಾಗಿ ನಾನು ಮನೆಯಲ್ಲೇ ಇದ್ದೆ. ಮೃತ ರವಿ ಆ ದಿನ ಕೆಲಸಕ್ಕೆ ಹೋಗಿದ್ದ. ಆತ ಒಂದು ವಾರದಿಂದ ಮನೆಯಲ್ಲಿ ಇರಲಿಲ್ಲ. ಆ ದಿನ ಸಂಜೆ

7.00 ಗಂಟೆಗೆ ಆತ ಮನೆಗೆ ಬಂದಿದ್ದ. ಆತನೇ ನನ್ನನ್ನು 'ಊಟ ಮಾಡಿದಿರಾ' ಎಂದು ಮಾತನಾಡಿಸಿದ್ದ. ನಾನು ಒಂದು ವಾರದಿಂದ ಏಕೆ ಬಂದಿರಲಿಲ್ಲ ಎನ್ನುವ ಬಗ್ಗೆ ಆತನನ್ನು ಕೇಳಲಿಲ್ಲ. ಆತ ಮನೆಯಲ್ಲಿ ಒಬ್ಬನೇ ಇದ್ದ. ಆತ ನಡೆದುಕೊಂಡು ಮನೆಗೆ ಬಂದಿದ್ದ. ನನ್ನ ಮನೆಯಿಂದ ಆತನ ಮನೆಗೆ ಮೆಟ್ಟಿಲುಗಳ ಮೂಲಕ ಯಾರು ಹೋಗುತ್ತಾರೆ, ಬರುತ್ತಾರೆ ಎನ್ನುವುದು ಚೆನ್ನಾಗಿ ಕಾಣುತ್ತದೆ. ಆತ ನಂತರ ಮನೆಯಿಂದ ಹೊರಕ್ಕೆ ಹೋದನೋ, ಇಲ್ಲವೋ ನನಗೆ ಗೊತ್ತಿಲ್ಲ. ಆತ ರಾತ್ರಿ ಮನೆಗೆ ಬಂದ ನಂತರ ಡ್ರಿಂಕ್ಸ್(ಮದ್ಯಪಾನ) ಮಾಡುವ ಅಭ್ಯಾಸ ಇಟ್ಟುಕೊಂಡಿದ್ದ. ಆತ ಹೊರಗಿನಿಂದ ಕುಡಿದುಕೊಂಡು ಬರುತ್ತಿದ್ದನೋ ಅಥವಾ ತಂದು ಕುಡಿಯುತ್ತಿದ್ದನೋ ಎನ್ನುವುದು ನನಗೆ ಗೊತ್ತಿಲ್ಲ. ನಾನು ದಿನಾಲೂ ರಾತ್ರಿ 10-30 ರಿಂದ 11-00 ಗಂಟೆಯೊಳಗೆ ಮಲುಗುತ್ತೇನೆ. ನನ್ನ ಮನೆಯಲ್ಲಿ ಹೆಂಡತಿ ಮಕ್ಕಳು ಇದ್ದಾರೆ. ನಾನು ವಾಸವಿರುವ ಮನೆಯ ಅಕ್ಕಪಕ್ಕದಲ್ಲಿ ಇರುವ ಎಲ್ಲಾ ಆರು ಮನೆಗಳಲ್ಲೂ ವಾಸವಿದ್ದಾರೆ. ಮೃತ ರವಿ ಇದ್ದಂತಹ ಮನೆಯ ಅಕ್ಕಪಕ್ಕ ಯಾರು ಇದ್ದರು ಎನ್ನುವುದು ನನಗೆ ಗೊತ್ತು. ರವಿಯ ಮನೆ ಮೊದಲನೆಯ ಮನೆಯಾಗಿತ್ತು. ಆತನ ಮನೆಯ ಪಕ್ಕದಲ್ಲಿ ಮುಸ್ಲಿಂ ಜನಾಂಗದ 'ಸಾಯಿರಾ' ಎನ್ನುವವರು ವಾಸ ಮಾಡುತ್ತಿದರು. ಅದರ ಪಕ್ಕದಲ್ಲಿ ರೇಣುಕಾಂಬ ಮತ್ತು ಆಕೆಯ ಗಂಡ ವಾಸ ಮಾಡುತ್ತಿದ್ದರು.

16. ನನಗೆ ಧೂಮಪಾನ ಮಾಡುವ ಅಭ್ಯಾಸ ಇದೆ. ದಿಃ14.12.2020 ರಂದು ಮನೆಯ ಒಳಗೆ ಧೂಮಪಾನ ಮಾಡಿದರೆ, ಹೊಗೆ ತುಂಬಿ ಮಕ್ಕಳು ಏಳುತ್ತಾರೆ, ಎನ್ನುವ ಕಾರಣಕ್ಕಾಗಿ ಮನೆಯಿಂದ ಹೊರಕ್ಕೆ ಬಂದು ಮನೆಯ ಮುಂಭಾಗದಲ್ಲಿ ಆಕಡೆಯಿಂದ ಈಕಡೆವರಗೆ ಓಡಾಡಿಕೊಂಡು ಸಿಗರೇಟ್ ಸೇದುತ್ತಿದ್ದೆ. ಈ ವಿಷಯವನ್ನು ನಾನು ಪೋಲೀಸರ ಮುಂದೆ ಹೇಳಿರುವುದಿಲ್ಲ. ರವಿ ಮೈಸೂರಿನವನು ಅಲ್ಲ ಎನ್ನುವುದು ಸರಿ. ಆದ್ದರಿಂದ ಆತನ ಸ್ನೇಹಿತರು ಯಾರು, ಜೊತೆಗಾರರು ಯಾರು, ಆತನ ಮನೆಗೆ ಯಾರು ಬಂದು ಹೋಗುತ್ತಿದ್ದರು, ಎನ್ನುವ ಮಾಹಿತಿ ನನಗೆ ಇರುವುದಿಲ್ಲ ಎನ್ನುವುದು ಸರಿಯಲ್ಲ. ಆತನ ಸ್ನೇಹಿತರು ಎಂದರೆ ನ್ಯಾಯಾಲಯದ ಮುಂದಿರುವ ಈ ಮೂವರು ಆರೋಪಿತರು ಮತ್ತು ರಾಜ, ಕಿರಣ್ ಎನ್ನುವವರು. ಮೃತ ರವಿ ಆತನ ಸ್ನೇಹಿತರು ಯಾರು ಯಾರು ಎನ್ನುವ ಬಗ್ಗೆ ನನ್ನ ಬಳಿಯಲ್ಲಿ ಚರ್ಚೆ ಮಾಡಿರಲಿಲ್ಲ. ರಾಜ ಮತ್ತು ಕಿರಣ್ ರವರು ಸಹ ನಮ್ಮ ಏರಿಯಾದವರೇ. ಅವರು ರವಿಯ ಮನೆಗೆ ಬರುತ್ತಿರಲಿಲ್ಲ.

17. ನಾನು ರವಿಯ ಜೊತೆ ಯಾವತ್ತೂ ಮದ್ಯಪಾನ ಮಾಡಿರಲಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ಆತನು ನನ್ನ ಮಗನ ವಯಸ್ಸಿನವನು ಎಂದು. ಮೃತ ರವಿಯ ಮನೆಯಲ್ಲಿ ಕುಡಿದು ಜೋರಾಗಿ ಮಾತನಾಡಿದರೆ ನನಗೆ ಕೇಳಿಸುತ್ತಿತ್ತು ಎನ್ನುವುದು ಸರಿ. ನಾನು ಆ ದಿನ ರಾತ್ರಿ 1–00 ಗಂಟೆಗೆ ಮಲಗುವ ಮುನ್ನ ರವಿ ಆತನ ಮನೆಯಲ್ಲಿದ್ದ. ಆತ ಮನೆಯಲ್ಲಿ ಏನು ಮಾಡಿದ್ದ, ಯಾರ ಜೊತೆಯಲ್ಲಿ ಕುಡಿದಿದ್ದ, ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಆತ ನನ್ನನ್ನು ಸಂಜೆ 7–00 ಗಂಟೆಗೆ 'ಊಟ ಮಾಡಿದಿರಾ' ಎಂದು ಮಾತನಾಡಿಸಿದಾಗ ಆತ ಮದ್ಯಪಾನ ಮಾಡಿದ್ದನೋ ಇಲ್ಲವೋ ನನಗೆ ಗೊತ್ತಿಲ್ಲ. ರಾತ್ರಿ 1–00 ಗಂಟೆಯ ಸಮಯದಲ್ಲಿ ಎಲ್ಲವೂ ನಿಶಬ್ದವಾಗಿರುತ್ತದೆ ಎನ್ನುವುದು ಸರಿ. ನನ್ನ ಮನೆಯ ಪಕ್ಕದಲ್ಲಿ ಮೆಟ್ಟಿಲುಗಳು ಇರುವುದರಿಂದ, ರವಿಯ ಮನೆಯಲ್ಲಿ ಬಾಟಲು ಬಿದ್ದಲ್ಲಿ, ಲೋಟ ಬಿದ್ದಲ್ಲಿ, ಜನರು ಓಡಾಡಿದ್ದಲ್ಲಿ, ಮೆಟ್ಟಿಲುಗಳಿಂದ ಇಳಿದ್ದಲ್ಲಿ ನಮ್ಮ ಮನೆಗೆ ಕೇಳಿಸುತ್ತದೆ ಎನ್ನುವುದು ಸರಿ. ನಾನು ರಾತ್ರಿ 1.00 ಗಂಟೆಗೆ ಮಲಗಿದ ನಂತರ ನನಗೆ ಯಾವ ಸದ್ದು ಕೇಳಿರುವುದಿಲ್ಲ.

18. ಮರುದಿನ ನಾನು ಬೆಳಿಗ್ಗೆ 8.30 ರಿಂದ 9.00 ಗಂಟೆಯ ಒಳಗೆ ಎದ್ದು ಹೊರಗೆ ಬಂದು ಟೀ ಕುಡಿಯುತ್ತಾ ಕುಳಿತಿದ್ದೆ. ಸಾಯಿರಾ ಬಂದು, ರವಿಯ ಮನೆಯ ಬಾಗಿಲು ತೆರೆದಿದೆ, ಆತ ಹಾಗೆಯೇ ಮಲಗಿದ್ದಾನೆ, ಹೆಂಗಸರು ಮಕ್ಕಳು ಓಡಾಡುತ್ತೇವೆ, ಹೋಗಿ ಹೇಳಿ ಎಂದು ಹೇಳಿದರು. ಆಗ ಬೆಳಿಗ್ಗೆ 9.30 ಆಗಿರಬಹುದು. ಆಗ ನಾನು ಒಬ್ಬನೇ ಮೇಲೆ ಹೋದೆ. ಬಾಗಿಲು ಸ್ವಲ್ಪ ತೆರೆದಿತ್ತು. ನಾನು ಪೂರ್ತಿ ತೆಗೆದು ನೋಡಿದೆ, ಆಗ ಆತ ಅಲ್ಲಿ ಮಲಗಿದ್ದ, ಬಾಟಲುಗಳು ಇದ್ದವು. ಆಗ ನಾನು ಪುಷ್ಪರಾಜುರವರಿಗೆ ಫೋನು ಮಾಡಿದೆ. ಪ್ಲಾಸ್ಟಿಕ್ ಗ್ಲಾಸುಗಳು ಇದ್ದವು. ಎಷ್ಟಿದ್ದವು ಎಂದು ಗಾಬರಿಯಲ್ಲಿ ನೋಡಲಿಲ್ಲ. ಪುಷ್ಪರಾಜುರವರೊಂದಿಗೆ, ರವಿ ಕೆಲಸ ಮಾಡುತ್ತಿದುದ್ದರಿಂದ, ಈ ವಿಷಯವನ್ನು ನಾನು ಅವರಿಗೆ ಫೋನು ಮಾಡಿ ತಿಳಿಸಿದೆ. ಅವರು ಕೂಡಲೇ ಬಂದು ನೋಡಿ ನಂತರ ಪೊಲೀಸರಿಗೆ ತಿಳಿಸಿದರು. ಚಾಸಾ–1 ರವರು ನನ್ನ ಎದುರಿನಲ್ಲಿ ಮೃತ ರವಿಯ ತಂದೆ ತಾಯಿಗೆ ವಿಷಯವನ್ನು ತಿಳಿಸಿರುವುದಿಲ್ಲ. ಚಾಸಾ–1 ರವರು ನನ್ನಲ್ಲಿ, ಮೃತ ರವಿ ಹಿಂದಿನ ದಿನ ಎಷ್ಟು ಹೊತ್ತಿಗೆ ಮನೆಗೆ ಬಂದ ಎನ್ನುವ ಬಗ್ಗೆ ವಿಚಾರಿಸಿರಲಿಲ್ಲ. ಚಾಸಾ–1 ರವರ ಮೊಬೈಲು ನಂಬರ್ ನನ್ನಲ್ಲಿತ್ತು. ನಾನು ಪುಷ್ಪರಾಜುವರ ಮೊಬೈಲು ನಂಬರನ್ನು ತಪ್ಪಾಗಿ ತಿಳಿಸಿರುತ್ತೇನೆ ಎಂದು ಪೊಲೀಸರ ಮುಂದೆ ಹೇಳಿರುವುದಿಲ್ಲ, ಪುಷ್ಪರಾಜುರವರು ಹೇಳಿರಬಹುದು. ಪುಷ್ಪರಾಜುರವರ ಮೊಬೈಲಿನಲ್ಲಿ ನನ್ನ ಮೊಬೈಲು ನಂಬರ್ ಸೇವ್ ಆಗಿತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಸುಮಾರು 15 ದಿನಗಳ ನಂತರ ಈ ಬಗ್ಗೆ ಹೇಳಿಕೆ ಪೊಲೀಸರ ಮುಂದೆ ನೀಡಿರಬಹುದು. ನಿಪಿ–3 ಮತ್ತು 5 ಫೋಟೋಗಳನ್ನು ಯಾರು ತೆಗೆದರು ಎನ್ನುವುದು ನನಗೆ ಗೊತ್ತಿಲ್ಲ.

19. ನಾನು ದಿಃ14.12.2020 ರಂದು ರಾತ್ರಿ 1.00 ಗಂಟೆಯಲ್ಲಿ ನನ್ನ ಮನೆಯಿಂದ ಹೊರಗಡೆ ಇರಲಿಲ್ಲ ಎನ್ನುವುದು ಸರಿಯಲ್ಲ. ಆ ದಿನ ರಾತ್ರಿ, ಮೃತ ರವಿ ಎಷ್ಟು ಹೊತ್ತಿಗೆ ಮನೆಗೆ ಬಂದ, ಆತನ ಮನೆಗೆ ಯಾರು ಯಾರು ಎಷ್ಟು ಹೊತ್ತಿಗೆ ಬಂದಿದ್ದರು ಎನ್ನುವ ಬಗ್ಗೆ ನಿಮಗೆ ಮಾಹಿತಿ ಇರುವುದಿಲ್ಲ ಎಂದು ಮಾಡಿದ ಸಲಹೆಗೆ ಸಾಕ್ಷಿ, 'ನಾನು ಕಣ್ಣಾರೆ ನೋಡಿರುತ್ತೇನೆ' ಎನ್ನುತ್ತಾರೆ. ಆ ದಿನ ರಾತ್ರಿ ನಾನು 1 ಮತ್ತು 3 ನೇ ಆರೋಪಿತರನ್ನು ಅಲ್ಲಿ ನೋಡಿರುವುದೇ ಇಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ, ಮೂವರು ಆರೋಪಿತರನ್ನು ನೋಡಿರುತ್ತೇನೆ ಎನ್ನುತ್ತಾರೆ. ಆರೋಪಿತರು ಎಷ್ಟು ಗಂಟೆಗೆ ರವಿಯ ಮನೆಗೆ ಬಂದರು ಮತ್ತು ಎಷ್ಟು ಗಂಟೆಗೆ ಮನೆಯಿಂದ ಹೊರಕ್ಕೆ ಹೋದರು ಎನ್ನುವ ಮಾಹಿತಿ ನನಗೆ ಇರುವುದಿಲ್ಲ ಎನ್ನುವುದು ಸರಿಯಲ್ಲ. ಸಾಯಿರಾರವರು ಬಂದು ಹೇಳಿದ ವಿಷಯವನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ಸಾಕ್ಷಿ ಸ್ವತಃ ನುಡಿಯುತ್ತಾರೆ, 'ಸಾಯಿರಾ' ಎನ್ನುವ ಹೆಸರನ್ನು ಹೇಳಿರುವುದಿಲ್ಲ, ಆದರೆ ಮೇಲಿನ ಮನೆಯವರು ಬಂದು ಹೇಳಿದರು, ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎನ್ನುತ್ತಾರೆ.

20. ಈ ಮೂವರು ಆರೋಪಿತರು ನಮ್ಮ ಏರಿಯಾದವರೇ. ಅವರಿಗೆ ಮನೆಗಳಿವೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎನ್ನುವುದು ಸರಿಯಲ್ಲ. ಚಾಸಾ–1 ರವರ ಹೇಳಿಕೆಯ ಮೇರೆಗೆ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ದಿಃ14.12.2020 ರಂದು ರಾತ್ರಿ 1 ಮತ್ತು 3 ನೇ ಆರೋಪಿತರು ಮೃತ ರವಿಯೊಂದಿಗೆ ಇರಲಿಲ್ಲ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರು ಪುನಃ ಮೇಲ್ಕಂಡ ಪಾಟೀಸವಾಲನ್ನು ಅಳವಡಿಸಿಕೊಳ್ಳುತ್ತೇನೆ ಎಂದು ತಿಳಿಸಿರುತ್ತಾರೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.